# ಜೋಗುಳ


ಕಪ್ಪು ಟಾರ್ ರಸ್ತೆಯ ಬದಿಯಲ್ಲೊಂದು
ಕಲ್ಲುಗಳ ಗುಡ್ಡೆ,
ಪಕ್ಕದಲ್ಲೊಂದು ಸುತ್ತಿಗೆ.

ಹದಿನೆಂಟರ ಅವಳು
ಮಗುವಿಗೆ ಹಾಲೂಡಿಸಿ,
ಮಲಗಿಸಿದಳು,
ಚಾಚಿದ ಗುಲ್‌ಮೊಹರಿನ
ನಿಲುಕುವ ಟೊಂಗೆಗಳ
ಸೀರೆಯ ತೊಟ್ಟಿಲಲ್ಲಿ.

ಬಸ್ಸುಗಳ, ಟ್ರಕ್ಕುಗಳ
ಭರ್–ಭರ್ ನಿನಾದ.
ಅವಳ ಸುತ್ತಿಗೆಯ
ಟಪ್–ಟಪ್ ಶಬ್ದ.
ಮಗು ನಿದ್ದೆಹೋಯಿತು.



ಚಿತ್ರಗಳು: ವಾಗೀಶ ಹೆಗಡೆ



# ನಾಟಕ

ಕಡುಬೇಸಿಗೆಯ ಒಂದು ದಿನ,
ಊರೆಲ್ಲ ಬೆವರಿರಲು,
ಮೂರೇ ಅಲುಗಿನ ಫ್ಯಾನೊಂದು
ಫಿರ್ರನೆ ತಿರುಗಿತು,

ತಂಗಾಳಿ ಪ್ರವಹಿಸಿತು
ಮೂಲೆಮೂಲೆಯಲಿ.
ಕಂದುಟಾಮಿ ಮಗ್ಗಲಾಗಿ
ಬಗಲಲ್ಲಿ ಅಡ್ಡಾಯಿತು.

ತೆಳುವಾದ ಹೊಟ್ಟೆ
ಮೇಲೆ ಕೆಳಗೆ, ಮೇಲೆ ಕೆಳಗೆ,
ಮೇಲೆ ಕೆಳಗೆ ಆಡುತ್ತಿತ್ತು.
ಕಾಲುಗಳೂ ಓಡುತ್ತಿದ್ದವು.

ಏನಿದು ಧ್ಯಾನ?
ಎತ್ತ ನಿನ್ನ ಗಮನ?
ನನ್ನ ಪಾತ್ರವೂ ಇದೆಯಾ, ನಿನ್ನ
ಕನಸಿನ ನಾಟಕದಲ್ಲಿ?